# <u>ಹರಿಯ ನೆನೆಯಿರೋ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 595.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 49.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 4.
4. **Note:** Lyrics given here are as per Ref. 1. The wordings in Ref. 2 are matching with Ref. 1. The wordings in Ref. 3 are slightly different (very minor differences) and are not considered here.
5. **Note:** Singer has followed these wordings.

ರಾಗ: ಶಂಕರಾಭರಣ ತಾಳ: ಅಟ

ಹರಿಯ ನೆನೆಯಿರೋ, ನಮ್ಮ
ಹರಿಯ ನೆನೆಯಿರೋ || ಪ ||

ಬರಿಯ ಮಾತನಾಡಿ ಬಾಯ
ಬರಡು ಮಾಡಿ ಕೆಡಲು ಬೇಡಿ || ಅಪ ||

ನಿತ್ಯವಲ್ಲ ಈ ಶರೀರವ
ಅನಿತ್ಯವೆಂದು ನೋಡಿರಯ್ಯ
ಹೊತ್ತು ಕಳೆಯಬೇಡಿ ನೀವು
ಮೃತ್ಯು ಬಾಹೋದೀಗಲೆ || 1 ||

ಕಾಮ ಕ್ರೋಧಗಳನು ತೊರೆದು
ಕಾಮನಯ್ಯನ ಕಥೆಯ ಬರೆದು
ಪ್ರೇಮದಿಂದ ಭಜಿಸಿರಯ್ಯ
ಪಾಮರರಂತೆ ತಿರುಗದೆ || 2 ||

ಹಾಳು ಹರಟೆಯಾಡಿ ಮನವ
ಬೀಳುಮಾಡಿಕೊಳ್ಳಬೇಡಿ
ಏಳು ದಿನದ ಕಥೆಯ ಕೇಳಿ
ಏಳಿರೋ ವೈಕುಂಠಕೆ || 3 ||

ಮೆಟ್ಟೆ ಪುಣ್ಯ ಕ್ಷೇತ್ರವನ್ನು
ಸುಟ್ಟು ಹೋಗ್ವುದಯ್ಯ ಪಾಪ, ಮನ
ಮುಟ್ಟಿ ಭಜಿಸಿರಯ್ಯ ಪುರಂದರ
ವಿಠ್ಠಲನ್ನ ಚರಣವ || 4 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ನಾಮಸ್ಮರಣೆ, ಕಥಾ ಕಾಲಕ್ಷೇಪ ಮತ್ತು ತೀರ್ಥಯಾತ್ರೆಗಳ ವೈಶಿಷ್ಟ್ಯವನ್ನು ಈ ಕೀರ್ತನೆ ಚಿತ್ರಿಸುತ್ತದೆ.

**ಕಾಮನಯ್ಯ** – ಮನ್ಮಥನ ತಂದೆ, ವಿಷ್ಣು.

**ಬೀಳುಮಾಡಿಕೊಳ್ಳಬೇಡಿ** – ಬರಡಾಗಿಸಬೇಡಿ; ಹಾಳುಮಾಡಿಕೊಳ್ಳದಿರಿ.

**ಏಳು ದಿನದ ಕಥೆ** = ಭಾಗವತ. ಪರೀಕ್ಷಿತ ರಾಜನಿಗೆ ಶುಕಾಚಾರ್ಯರು ಈ ಕಥೆಯನ್ನು ಏಳು ದಿನದಲ್ಲಿ ಮುಗಿಸಿದ್ದಾರೆ. ಪುರಾಣವನ್ನು ಏಳು ದಿನಗಳ ಕಾಲ ಶ್ರವಣ ಮಾಡಿಸಿದರೆಂದು 'ಸಪ್ತಾಹ'ವೆನ್ನುವ ಹೆಸರು ವಾಡಿಕೆಗೆ ಬಂದಿತು.

**ಮೆಟ್ಟೆ** = ಮೆಟ್ಟಲು

**ಮುಟ್ಟಿ** – ಮನಮುಟ್ಟಿ, ಮನಸಾರೆ.

**Classification:** Keerthane
**Ankita:** purandara vittala
**Location:** NA
**Category:** Loka Neeti, Nama Smarane
**Sub-Category:** Krishna, bayi, deha, marana, sittu, prema, bhajane, haraTe, mana, dina, papa, vaikunta, bhagavata,
**Pravachana:** NA
**Explanation:** NA